
First Cover

# ನೀನಾಸಮ್
# ಸಂಸ್ಕೃತಿ ಶಿಬಿರ



## ಕಾರ್ಯಕ್ರಮಗಳಿಗೆ
## ಸ್ವಾಗತ

ಸ್ಥಳ: ಶಿವರಾಮ ಕಾರಂತ ರಂಗಮಂದಿರ, ಹೆಗ್ಗೋಡು
ಸಮಯ: ಪ್ರತಿದಿನ ಸಂಜೆ ೬ ಗಂಟೆ
ಪ್ರವೇಶ:
ರೂ. ೧೦೦ (ಎಲ್ಲ ದಿನಕ್ಕೆ)
ರೂ. ೧೫, ರೂ. ೧೦ (ಪ್ರತಿದಿನ)

Second Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೩

೧೯೭೯ರಿಂದ ಸತತವಾಗಿ ನೀನಾಸಮ್ ಪ್ರತಿ ಅಕ್ಟೋಬರಿನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದೆ. ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ — ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರ ವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ.

ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ- ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ-ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ ರ ತನಕ ನಡೆಯುತ್ತದೆ.

ಇದಲ್ಲದೆ ಪ್ರತಿದಿನ ಸಂಜೆ ರಂಗಪ್ರದರ್ಶನ, ಸಂಗೀತ, ನೃತ್ಯ ಹಾಗೂ ಇನ್ನಿತರ ಕಾರ್ಯಕ್ರಮಗಳು ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಏರ್ಪಾಟಾಗಿರುತ್ತದೆ. ಸಂಜೆಯ ಹೊತ್ತು ನಡೆಯುವ ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಥೂಲ ವಿವರ ಮತ್ತು ಪರಿಚಯಗಳು ಮುಂದಿನ ಪುಟಗಳಲ್ಲಿವೆ.

**ಶಿಬಿರ ನಿರ್ದೇಶಕರು: ಡಾ. ಯು.ಆರ್. ಅನಂತಮೂರ್ತಿ**

To be printed on the Cover

ತೆರೆದ ಅಂಚೆ

ಶ್ರೀಮತಿ/ಶ್ರೀ....................................................................
.................................................................................
.................................................................................
.................................................................................

ಅವರಿಗೆ

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೦೩
# ಆಹ್ವಾನ

---

ನೀನಾಸಮ್, ಹೆಗ್ಗೋಡು, ಸಾಗರ
ಶಿವಮೊಗ್ಗ ಜಿಲ್ಲೆ ೫೭೭ ೪೧೭

Third Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಹಗಲಿನ ಕಾರ್ಯಕ್ರಮಗಳು

ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಸಂಸ್ಕೃತಿ ಜಿಜ್ಞಾಸೆ' ಎಂಬ ವಿಷಯವನ್ನು ಕುರಿತು ಸ್ಥೂಲವಾಗಿ ಕೇಂದ್ರೀಕರಿಸುತ್ತದೆ.

ಸ್ಥೂಲವಾಗಿ, ಸಂಸ್ಕೃತಿ ಎಂಬ ಪರಿಕಲ್ಪನೆಯ ಅರ್ಥವ್ಯಾಪ್ತಿ ಮತ್ತು ವೈವಿಧ್ಯಗಳನ್ನು ನಿರ್ದಿಷ್ಟ ಸಮಾಜ ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಅರ್ಥಮಾಡಿಕೊಳ್ಳುವುದು ಈ ಜಿಜ್ಞಾಸೆಯ ಪ್ರಮುಖ ಆಶಯ. ಈ ಹಿನ್ನೆಲೆಯಲ್ಲಿ ಕನ್ನಡವೂ ಸೇರಿದಂತೆ ಕೆಲವು ನಿರ್ದಿಷ್ಟ ಪ್ರದೇಶಗಳ ಮತ್ತು ಬೇರೆಬೇರೆ ಕಲೆಗಳ ಸಾಂಸ್ಕೃತಿಕ ಸ್ವರೂಪವನ್ನು ಕುರಿತಾದ ಹಲವಾರು ಉಪನ್ಯಾಸಗಳು ಇಲ್ಲಿ ಯೋಜಿತವಾಗಿವೆ. ಜತೆಗೆ, ವಿಜ್ಞಾನ-ಧರ್ಮ ಇತ್ಯಾದಿ ಕ್ಷೇತ್ರಗಳಿಗೂ ಸಂಸ್ಕೃತಿಗೂ ಇರುವ ಸಂಬಂಧದ ಕುರಿತಾದ ಚರ್ಚೆ ಉಪನ್ಯಾಸಗಳೂ ಇಲ್ಲಿ ಸೇರಿರುತ್ತವೆ.

ಡಾ. ಚಂದ್ರಶೇಖರ ಕಂಬಾರ, ಶ್ರೀ ಶಿವ ವಿಶ್ವನಾಥನ್, ಶ್ರೀ ಸಮೀಕ್ ಬ್ಯಾನರ್ಜಿ, ಶ್ರೀಮತಿ ಸುದೇಷ್ಣಾ ಬ್ಯಾನರ್ಜಿ, ಶ್ರೀ ಮನು ಚಕ್ರವರ್ತಿ, ಶ್ರೀ ಕಿ.ರಂ. ನಾಗರಾಜ, ಶ್ರೀ ರಾಜೇಂದ್ರ ಚೆನ್ನಿ, ಶ್ರೀಮತಿ ವೈದೇಹಿ, ಶ್ರೀಮತಿ ಸವಿತಾ ನಾಗಭೂಷಣ, ಶ್ರೀ ವಿವೇಕ ಧಾರೇಶ್ವರ, ಶ್ರೀ ಜಯಂತ ಕಾಯ್ಕಿಣಿ, ಶ್ರೀ ಬಸವರಾಜ ಕಲ್ಗುಡಿ, ಶ್ರೀ ಕೆ.ಎಚ್. ಶ್ರೀನಿವಾಸ್, ಶ್ರೀ ಎಸ್. ಜಿ. ವಾಸುದೇವ್ — ಮೊದಲಾದವರು ಈ ಎಲ್ಲ ಚರ್ಚೆ ಮತ್ತು ಉಪನ್ಯಾಸಗಳನ್ನು ನಡೆಸಲಿದ್ದಾರೆ.

ಇನ್ನು, ನೀನಾಸಮ್ ತಿರುಗಾಟ ನಾಟಕಗಳ ಚರ್ಚೆಯೇ ಅಲ್ಲದೆ ಸಂಗೀತ, ಚಿತ್ರಕಲೆ ಮತ್ತು ಚಲನಚಿತ್ರ ರಸಗ್ರಹಣ ಕಾರ್ಯಕ್ರಮವನ್ನೂ ಸಹ ಶಿಬಿರದಲ್ಲಿ ಸೇರಿಸಿಕೊಳ್ಳಲಾಗಿದೆ.

ಶಿಬಿರ ಸಾಮಗ್ರಿಯ ಪ್ರಾಯೋಜನೆ
**ಮಲೆನಾಡುಅಡಿಕೆ ಮಾರಾಟದ ಸಹಕಾರ ಸಂಘ, ನಿ., ಶಿವಮೊಗ್ಗ**

**ಅಕ್ಟೋಬರ್ ೧೨ ಭಾನುವಾರ**

ತಿರುಗಾಟ ನಾಟಕ

## ಅವಸ್ಥೆ

ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ಆಧಾರ
ವಿನ್ಯಾಸ, ರಂಗರೂಪ
ಮತ್ತು ನಿರ್ದೇಶನ: ಪ್ರಕಾಶ ಬೆಳವಾಡಿ

ಕನ್ನಡದ ಪ್ರಸಿದ್ಧ ಲೇಖಕ ಯು.ಆರ್. ಅನಂತಮೂರ್ತಿ ಅವರ ಕಾದಂಬರಿಯನ್ನು ಆಧರಿಸಿ, ತಿರುಗಾಟದ ಈ ಪ್ರಯೋಗಕ್ಕಾಗಿಯೇ ಸಿದ್ಧಪಡಿಸಿದ ನಾಟಕರೂಪ ಇದು. ಸಮಾಜವಾದಿ ಚಳುವಳಿಯಲ್ಲಿ ಕ್ರಿಯಾಶೀಲನಾಗಿರುವ ರಾಜಕೀಯ ನಾಯಕನೊಬ್ಬನನ್ನು ಕೇಂದ್ರವಾಗಿ ಇಟ್ಟುಕೊಂಡಿರುವ ಈ ಕೃತಿಯು, ಆತನ ಅಂತರಂಗ ಮತ್ತು ಬಹಿರಂಗದ ಜಗತ್ತುಗಳ ನಡುವಿನ ಸಂಬಂಧವನ್ನು ವಿಶ್ಲೇಷಿಸಲು ಹೊರಡುತ್ತದೆ; ಮತ್ತು ಆ ಮೂಲಕ ನಮ್ಮ ಕಾಲದ ರಾಜಕಾರಣದ ತಾತ್ವಿಕ ಆಕೃತಿಯೊಂದನ್ನು ಕಟ್ಟುವ ಮಹತ್ವಾಕಾಂಕ್ಷೆಯಿಂದ ಉದ್ಯುಕ್ತ ವಾಗಿದೆ. ಕನ್ನಡದಲ್ಲಿ ಈಗಾಗಲೇ ಪ್ರಮುಖ ಕಾದಂಬರಿಯೆಂದು ಪ್ರಸಿದ್ಧವಾಗಿರುವ ಈ ಕೃತಿಯನ್ನು ಸಮಕಾಲೀನ ಸಂದರ್ಭದಲ್ಲಿ ರಂಗಕ್ಕೆ ರೂಪಾಂತರಿಸುವ ಮೂಲಕ ಇದರ ಒಂದು ಪುನರ್ ವ್ಯಾಖ್ಯಾನಕ್ಕೆ ಯತ್ನಿಸುವುದು ಕೂಡಾ ಪ್ರಸ್ತುತ ಪ್ರಯೋಗದ ಆಶಯ.

ಪ್ರಾಯೋಜನೆ
**ದಿ. ಶ್ರೀ ಕಾಶಿ ಮಂಜಭಟ್ ಅವರ ನೆನಪಿಗೆ**
**ಭಾ.ಮ. ಶಿಕ್ಷಣ ಮತ್ತು ಸಾಂಸ್ಕೃತಿಕ ವೇದಿಕೆ, ಶಿವಮೊಗ್ಗ**



**ಅಕ್ಟೋಬರ್ ೧೩ ಸೋಮವಾರ**

ತಿರುಗಾಟ ನಾಟಕ

## ಮೊದಲಗಿತ್ತಿ

ಇಮ್ರಾನ್ ಹುಸೇನ್ ಅವರ ಅಸ್ಸಾಮಿ ಕಥೆ 'ಜಾತ್ರಾ' ಆಧಾರ
ಕನ್ನಡಕ್ಕೆ: ಭಾಗೀರಥಿ ಬಹರುಲ್ ಇಸ್ಲಾಮ್
ವಿನ್ಯಾಸ, ರಂಗರೂಪ, ನಿರ್ದೇಶನ: ಬಹರುಲ್ ಇಸ್ಲಾಮ್

ಅಸ್ಸಾಮಿ ಸಣ್ಣಕಥೆಯೊಂದನ್ನಾಧರಿಸಿ ಸಿದ್ಧಪಡಿಸಿದ ನಾಟಕ ರೂಪ ಇದು. ಸಾಂಪ್ರದಾಯಿಕ ಮುಸ್ಲಿಂ ಕುಟುಂಬವೊಂದರಲ್ಲಿ ಮೊದಲ ಗಂಡನಿಂದ ವಿಚ್ಛೇದಿತಳಾಗಿ, ಹಲವು ಬಗೆಯ ಕಷ್ಟಗಳಿಗೆ ಒಳಗಾಗುವ, ಆದರೆ ಆ ಕಷ್ಟಗಳೆಲ್ಲವನ್ನೂ ತನ್ನದೇ ವಿಶೇಷ ಛಾತಿಯಿಂದ ನಿಭಾಯಿಸುತ್ತ ಹೋಗುವ ರಾಬಿಯಾ ಎಂಬ ಒಬ್ಬ ಹೆಣ್ಣಿನ ಕಥೆ ಈ ನಾಟಕದ ಕೇಂದ್ರ ವಸ್ತು. ತನ್ನ ಸಾಧಾರಣತೆಯಲ್ಲಿಯೇ ಅಸಾಧಾರಣ ತಾಳಿಕೆಯೊಂದನ್ನು ಸಾಧಿಸುವ ಆಕೆಯ ವಿಶಿಷ್ಟ ಸ್ತ್ರೀಶಕ್ತಿಯನ್ನು ಕೇಂದ್ರೀಕರಿಸಿಯೇ ಈ ನಾಟಕದ ಇಡಿಯ ಕಥಾ ಹಂದರವು ಹಬ್ಬಿಕೊಂಡಿದೆ. ಒಂದುಕಡೆಗೆ, ಈ ನಾಟಕವು ಅಲ್ಪಸಂಖ್ಯಾತ ಸಮುದಾಯವೊಂದರ ಬದುಕನ್ನು ಅದರ ಎಲ್ಲ ಸ್ವಾರಸ್ಯಕರ ವೈಶಿಷ್ಟ್ಯ ಗಳೊಂದಿಗೆ ನಿರೂಪಿಸುತ್ತದೆ. ಅದರೆ ಜತೆಗೇ, ಆ ಸಮುದಾಯದ ಬಗ್ಗೆ ವಿಮರ್ಶಾತ್ಮಕ ವಾಗಿಯೂ ನೋಡುವ ಪ್ರಯತ್ನ ನಡೆಸುತ್ತದೆ.

ಪ್ರಾಯೋಜನೆ
**ಮಲೆನಾಡು ಅರೆಕಾನಟ್ ಸಿಂಡಿಕೇಟ್**
**ಶಿವಮೊಗ್ಗ**



**ಅಕ್ಟೋಬರ್ ೧೪ ಮಂಗಳವಾರ**

ನೃತ್ಯ ಕಾರ್ಯಕ್ರಮ

## ಶುಭಾ ಧನಂಜಯ್


ಮತ್ತು ತಂಡ, ಬೆಂಗಳೂರು – ಅವರಿಂದ

ಭರತನಾಟ್ಯ ಮತ್ತು ಕಥಕ್ -- ಈ ಎರಡೂ ಪ್ರಕಾರಗಳಲ್ಲಿ ತರಬೇತಿಯನ್ನು ಪಡೆದಿರುವ ಶ್ರೀಮತಿ ಶುಭಾ ಧನಂಜಯ್ ಅವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿ ನಾಟ್ಯತರಂಗ ಎಂಬ ನೃತ್ಯಶಾಲೆಯನ್ನು ನಡೆಸುತ್ತಿದ್ದಾರೆ. ಶ್ರೀಮತಿ ಶುಭಾ ಅವರು ಮಧುರೆಯ ಗುರು ಎಸ್.ವಿ.ಶ್ರೀನಿವಾಸ್ ಅವರಿಂದ ಭರತನಾಟ್ಯವನ್ನೂ ಗುರು ಮಾಯಾ ರಾವ್ ಅವರಿಂದ ಕಥಕ್‌ನ್ನೂ ಕಲಿತು ಮುಂದೆ ಪದ್ಮಾ ಸುಬ್ರಹ್ಮಣ್ಯಮ್ ಮೊದಲಾದ ಹಲವು ಪ್ರಸಿದ್ಧ ನರ್ತಕರೊಂದಿಗೆ ಸಹವರ್ತಿಯಾಗಿದ್ದು ತಮ್ಮ ಅನುಭವವನ್ನು ವಿಸ್ತರಿಸಿಕೊಂಡಿದ್ದಾರೆ. ದೇಶವಿದೇಶದ ಹಲವಾರು ಸ್ಥಳಗಳಲ್ಲಿ ಇವರ ನೃತ್ಯ ಕಾರ್ಯಕ್ರಮಗಳು ನಡೆದಿವೆ; ದೂರದರ್ಶನಕ್ಕೆ ಇವರು ಹಲವಾರು ಕಾರ್ಯಕ್ರಮ ನೀಡಿದ್ದಾರೆ; ಹಲವಾರು ನೃತ್ಯಸಂಯೋಜನೆಗಳನ್ನೂ ಇವರು ಮಾಡಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಶ್ರೀಮತಿ ಶುಭಾ ಧನಂಜಯ್ ಅವರಲ್ಲದೆ, ಅವರ ನಾಟ್ಯತರಂಗ ನೃತ್ಯಶಾಲೆಯಲ್ಲಿ ತರಬೇತಿ ಪಡೆಯುತ್ತಿರುವ ಹಿರಿಯ ವಿದ್ಯಾರ್ಥಿಗಳೂ ಪ್ರದರ್ಶನ ನೀಡಲಿದ್ದಾರೆ.

ಪ್ರಾಯೋಜನೆ
**ಮಂಗಳೂರು ವಿದ್ಯುತ್ ಸರಬರಾಜು ಕಂಪೆನಿ**
**ನಿಯಮಿತ**

**ಅಕ್ಟೋಬರ್ ೧೫ ಬುಧವಾರ**



ಹಿಂದುಸ್ತಾನಿ ಧ್ರುಪದ್ ಗಾಯನ

## ಶ್ರೀ ಉದಯ ಭವಾಲ್ಕರ್

ಪುಣೆ – ಅವರಿಂದ

ಮೂಲತಃ ಮಧ್ಯಪ್ರದೇಶ ರಾಜ್ಯದವರಾದ ಉದಯ ಭವಾಲ್ಕರ್ ಅವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ಸಂಗೀತದ ಅಭ್ಯಾಸವನ್ನು ಆರಂಭಿಸಿದವರು. ೧೯೮೧ರಲ್ಲಿ ಅವರು ವಿಶೇಷ ಶಿಷ್ಯವೇತನವೊಂದನ್ನು ಪಡೆದು ಭೋಪಾಲಿನ ಪ್ರಸಿದ್ಧ ಗಾಯಕರಾದ ಉಸ್ತಾದ್ ಝಿಯಾ ಫರೀದುದ್ದೀನ್ ಡಾಗರ್ ಅವರ ಬಳಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಾಚೀನ ಶೈಲಿ ಎಂದು ಹೆಸರಾಗಿರುವ 'ಧ್ರುಪದ ಸಂಗೀತ'ವನ್ನು ಅಭ್ಯಾಸ ಮಾಡಿದರು. ೧೯೮೫ರಿಂದ ಸಾರ್ವಜನಿಕ ಕಾರ್ಯಕ್ರಮಗಳನ್ನು ಕೊಡಲು ಆರಂಭಿಸಿರುವ ಉದಯ ಭವಾಲ್ಕರ್ ಅಲ್ಲಿಂದ ಇಲ್ಲಿಯವರೆಗೆ ಭಾರತದ ಎಲ್ಲ ಪ್ರಮುಖ ಕೇಂದ್ರಗಳಲ್ಲಿ ಮತ್ತು ವಿದೇಶದ ಹಲವು ಪ್ರತಿಷ್ಠಿತ ಉತ್ಸವಗಳಲ್ಲಿ ತಮ್ಮ ಕಛೇರಿಯನ್ನು ನಡೆಸಿದ್ದಾರೆ. ಮಧ್ಯಪ್ರದೇಶ ಸರ್ಕಾರದ ಕುಮಾರ ಗಂಧರ್ವ ಸನ್ಮಾನವೂ ಸೇರಿ ಹಲವು ಗೌರವಗಳು ಇವರಿಗೆ ಬಂದಿವೆ.


ಪ್ರಸ್ತುತ ಕಾರ್ಯಕ್ರಮದಲ್ಲಿ ಶ್ರೀ ಉದಯ ಭವಾಲ್ಕರ್ ಅವರಿಗೆ ಪಕಾವಾಜ್ ಸಾಥಿ ನೀಡುವವರು – ಶ್ರೀ ಮಾಣಿಕ್ ಮುಂಡೆ.

ಪ್ರಾಯೋಜನೆ

**ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ**
**ಬೆಂಗಳೂರು**



**ಅಕ್ಟೋಬರ್ ೧೬ ಗುರುವಾರ**
**ಕಾರ್ಯಕ್ರಮದ ಪ್ರಥಮಾರ್ಧ: ೬೦ ನಿಮಿಷ**



ಇಂಡೋಜಾಸ್ ಸಂಗೀತ ಕಾರ್ಯಕ್ರಮ

## ರಾಮನ್ ಮತ್ತು ಸ್ನೇಹಿತರು

ಬೆಂಗಳೂರು – ಅವರಿಂದ

ಪಾಶ್ಚಾತ್ಯ ಸಂಗೀತದ ಜನಪ್ರಿಯ ಶೈಲಿಗಳಲ್ಲಿ ಪ್ರಮುಖವಾದದ್ದು ಜಾಸ್. ಅದನ್ನು ಭಾರತದ ತಾಲವಾದ್ಯಗಳೊಂದಿಗೆ ಕೂಡಿಸಿ, ಬೆಂಗಳೂರಿನ ಪ್ರಸ್ತುತ ತಂಡವು, ಹೊಸದಾದ ಇಂಡೋ ಜಾಸ್ ಎಂಬ ಪ್ರಕಾರವನ್ನು ನಿರ್ಮಿಸಿಕೊಂಡಿದೆ. ಈ ತಂಡದ ಮುಖ್ಯಸ್ಥ ಎಸ್. ರಾಮನ್ ಅಯ್ಯರ್, ಬಿಷಪ್ ಕಾಟನ್ ಶಾಲೆಯಲ್ಲಿ ಸಂಗೀತಾಭ್ಯಾಸ ಮಾಡಿದವರು; ಕದ್ರಿ ಗೋಪಾಲನಾಥ್ ಮೊದಲಾದ ಹಲವಾರು ಭಾರತೀಯ ವಾದ್ಯಕಾರರೊಂದಿಗೂ ಒಡನಾಡಿದವರು. ಈಗಾಗಲೇ ನೂರಕ್ಕೂ ಹೆಚ್ಚು ಉದ್ಯಮ-ಉತ್ಸವಗಳಲ್ಲಿ ಇವರ ಸಂಗೀತ ಪ್ರಯೋಗಗಳು ನಡೆದು ದೇಶಾದ್ಯಂತ ಜನಪ್ರಿಯವಾಗಿವೆ.


ಆಯ್ದ ಸಂಗೀತ ಭಾಗಗಳ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ವಾದ್ಯಕಾರರು – ಶ್ರೀ ಎಸ್. ರಾಮನ್ ಅಯ್ಯರ್ (ಸ್ಯಾಕ್ಸೊಫೋನ್, ಕ್ಲಾರಿಯೊನೆಟ್ ಮತ್ತು ಕೊಳಲು), ಶ್ರೀ ಪ್ರಸನ್ನ (ಕೀ ಬೋರ್ಡ್), ಶ್ರೀ ವಿನಾಯಕ (ತಬಲಾ) ಹಾಗೂ ಶ್ರೀ ಸುರೇಶ್ (ವಯೋಲಿನ್).

ಪ್ರಾಯೋಜನೆ

**ಸಂಸ್ಕೃತಿ ಭಾರತಿ ಟ್ರಸ್ಟ್**
**ದೆಹಲಿ**



**ಅಕ್ಟೋಬರ್ ೧೬ ಗುರುವಾರ**
**ಕಾರ್ಯಕ್ರಮದ ದ್ವಿತೀಯಾರ್ಧ: ೬೦ ನಿಮಿಷ**



ಆಧುನಿಕ ನೃತ್ಯ ಕಾರ್ಯಕ್ರಮ

## ಅಟ್ಟಕಳರಿ

ಬೆಂಗಳೂರು – ತಂಡದ ಕಲಾವಿದರಿಂದ


೧೯೯೨ರಲ್ಲಿ ಆರಂಭವಾದ ಈ ಆಧುನಿಕ ನೃತ್ಯ ಕಲೆಗಳ ತಂಡವು ಕೇರಳದ ಸಮರಕಲೆಗಳು ಮತ್ತು ವಿಭಿನ್ನ ನೃತ್ಯಮಾದರಿಗಳನ್ನು ಕಸಿಮಾಡಿ ತನ್ನ ವಿಶಿಷ್ಟ ಪ್ರಯೋಗಗಳನ್ನು ರೂಪಿಸಿಕೊಂಡಿದೆ. ಪ್ರಸ್ತುತ ಈ ತಂಡ ಬೆಂಗಳೂರಿನಲ್ಲಿ ನೆಲೆಯಾಗಿ ತನ್ನದೇ ತರಬೇತಿ ಕೇಂದ್ರವನ್ನು ನಡೆಸುತ್ತಿದೆ. ಅಲ್ಲಿ ಪ್ರಯೋಗಾತ್ಮಕ ನೃತ್ಯನಿರ್ಮಾಣದ ಜತೆಗೆ, ಮಕ್ಕಳಲ್ಲಿ ನೃತ್ಯದ ಬಗ್ಗೆ ಅರಿವು ಮೂಡಿಸುವ ಶಿಕ್ಷಣ ಕಾರ್ಯಕ್ರಮ ಮತ್ತು ಇನ್ನಿತರ ಹಲವಾರು ಯೋಜನೆಗಳನ್ನೂ ನಡೆಸಲಾಗುತ್ತಿದೆ.

ಈ ಕಾರ್ಯಕ್ರಮದಲ್ಲಿ, ಇದುವರೆಗಿನ ಅವರ ಪ್ರಯೋಗಗಳಿಂದ ಆಯ್ದ ನೃತ್ಯಭಾಗಗಳನ್ನು ಪ್ರದರ್ಶಿಸಲಾಗುತ್ತದೆ. ತಂಡದ ಸದಸ್ಯರು: ಅಭಿಲಾಷ್ ಎನ್., ದೀಪಕ್ ಕೆ.ಎಸ್., ದಯಾಲ್ ಬಾಪು, ಇಲಾನ್ ಕೆ., ರೋಹಿಣಿ ಎನ್., ಮೀರಾ, ಹೇಮಾ ಭಾರತಿ, ವೀಣಾ ಬಸವರಾಜಯ್ಯ. ತಾಂತ್ರಿಕ ನಿರ್ವಹಣೆ: ವಿಲ್ಸನ್. ನೃತ್ಯ ಸಂಯೋಜನೆ: ಜಯಚಂದ್ರನ್, ಬೆಟಿನಾ ಹೊಲ್ಮಾಸೆನ್ ಮತ್ತು ಯೇಲ್ ಫ್ಲೆಕ್ಸರ್.

ಪ್ರಾಯೋಜನೆ

**ನ್ಯಾಷನಲ್ ಎಜುಕೇಷನ್ ಸೊಸೈಟಿ**
**ಶಿವಮೊಗ್ಗ**

ಅಕ್ಟೋಬರ್ ೧೭ ಶುಕ್ರವಾರ



ಕವಿಗೋಷ್ಠಿ

## ಕನ್ನಡದ ಪ್ರಸಿದ್ಧ ಕವಿಗಳಿಂದ

ಮತ್ತು ಕಾವ್ಯವಾಚನ

## ಹೊಸಳ್ಳಿ ಆರ್. ಕೇಶವಮೂರ್ತಿ

ಅವರಿಂದ

ಪ್ರಸ್ತುತ ಕಾರ್ಯಕ್ರಮದಲ್ಲಿ ಕಾವ್ಯವಾಚನದ ಸಾಂಪ್ರದಾಯಿಕ ಮತ್ತು ಆಧುನಿಕ ಮಾರ್ಗಗಳೆರಡನ್ನು ಸಮ್ಮೇಳಗೊಳಿಸುವ ಒಂದು ಪ್ರಯೋಗವನ್ನು ಮಾಡಲಾಗುತ್ತಿದೆ. ಮೊದಲ ಭಾಗದಲ್ಲಿ ಸಮಕಾಲೀನ ಕನ್ನಡದ ನಾಲ್ವರು ಪ್ರಮುಖ ಕವಿಗಳು ತಮ್ಮ ಕವನಗಳನ್ನು ವಾಚಿಸಲಿದ್ದಾರೆ. ಮತ್ತು ಎರಡನೆಯ ಭಾಗದಲ್ಲಿ ಸಾಂಪ್ರದಾಯಿಕವಾಗಿ ಕಾವ್ಯವಾಚನವನ್ನು ಮಾಡುವ 'ಗಮಕ' ಶೈಲಿಯಲ್ಲಿ ಕನ್ನಡದ ಕಾವ್ಯವೊಂದನ್ನು ಪ್ರಸ್ತುತಪಡಿಸಲಾಗುತ್ತದೆ.

ಪ್ರಥಮಾರ್ಧದ ಕವಿಗೋಷ್ಠಿಯಲ್ಲಿ ಭಾಗವಹಿಸುವ ಕವಿಗಳು – **ಶ್ರೀ. ಚಂದ್ರಶೇಖರ ಕಂಬಾರ, ಶ್ರೀಮತಿ ವೈದೇಹಿ, ಶ್ರೀ ಜಯಂತ ಕಾಯ್ಕಿಣಿ, ಶ್ರೀಮತಿ ಸವಿತಾ ನಾಗಭೂಷಣ.**


ದ್ವಿತೀಯಾರ್ಧದಲ್ಲಿ ಕುಮಾರವ್ಯಾಸಭಾರತದ ವಾಚನ ಕಾರ್ಯಕ್ರಮ – ವಾಚನಕಾರರು: **ಶ್ರೀ. ಹೊಸಳ್ಳಿ ಆರ್. ಕೇಶವ ಮೂರ್ತಿ** ಮತ್ತು ವ್ಯಾಖ್ಯಾನಕಾರರು: **ಶ್ರೀ ರಾಜಾರಾಮಮೂರ್ತಿ.**

ಪ್ರಾಯೋಜನೆ

**ಶಿವಮೊಗ್ಗ ಹಾಲು ಉತ್ಪಾದಕರ ಒಕ್ಕೂಟ**
**ಶಿವಮೊಗ್ಗ**



ಅಕ್ಟೋಬರ್ ೧೮ ಶನಿವಾರ



ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

## ಮಾಸ್ಟರ್ ಅಭಿಷೇಕ್ ರಘುರಾಮ್

ತಂಡದವರಿಂದ

ತಮ್ಮ ಎಳೆಯ ವಯಸ್ಸಿನಲ್ಲಿಯೇ ಅಸಾಧಾರಣ ಸಂಗೀತ ಪ್ರತಿಭೆಯನ್ನು ಕಾಣಿಸಿ ಗಮನ ಸೆಳೆದ ಮಾಸ್ಟರ್ ಅಭಿಷೇಕ್ ರಘುರಾಮ್ ಅವರು ದಕ್ಷಿಣಾದಿ ಸಂಗೀತದ ಪ್ರಸಿದ್ಧ ಕಲಾವಿದ ಮನೆತನವೊಂದರಲ್ಲಿ ಬಂದವರು; ಇವರು ಖ್ಯಾತ ಮೃದಂಗವಾದಕ ಪಾಲ್ಘಾಟ್ ರಘು ಅವರ ಮೊಮ್ಮಗ. ಈಗ ಹದಿನೆಂಟರ ಹರಯದಲ್ಲಿರುವ ಅಭಿಷೇಕ್ ತಮ್ಮ ಹನ್ನೊಂದನೆಯ ವರ್ಷದಿಂದ ಸಂಗೀತ ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ; ಖಂಜರ ವಾದಕರಾಗಿಯೂ ಹೆಸರಾಗಿದ್ದಾರೆ.

ವಿದ್ವಾನ್ ಪಿ.ಎಸ್. ನಾರಾಯಣ ಸ್ವಾಮಿ ಅವರ ಬಳಿ ಶಿಷ್ಯರಾಗಿ ಸಂಗೀತ ಕಲಿತಿರುವ ಮಾಸ್ಟರ್ ಅಭಿಷೇಕ್ ಅವರು ಈಗಾಗಲೇ ದೇಶವಿದೇಶದ ಹಲವು ಸ್ಥಳಗಳಲ್ಲಿ, ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಮಾಸ್ಟರ್ ಅಭಿಷೇಕ್ ಅವರೊಂದಿಗೆ ಕೂಡುವ ಕಲಾವಿದರು – ವಯೋಲಿನ್: ಎಚ್.ಕೆ. ವೆಂಕಟರಾಮ್, ಮೃದಂಗ: ಪಾಲ್ಘಾಟ್ ರಘು ಮತ್ತು ಖಂಜರ: ಎನ್. ಅಮೃತ್.

ಪ್ರಾಯೋಜನೆ

**ಕರ್ನಾಟಕ ಬ್ಯಾಂಕ್ ಲಿ.,**
**ಪ್ರಧಾನ ಕಛೇರಿ: ಮಂಗಳೂರು**



# NINASAM
# CULTURE COURSE 2003

Heggodu, Sagara Tq.,Shimoga Dist.,
Karnataka 577 417
Ph: 08183-365646 Fax: 08183-365673

We are grateful to
the following organisations
for their kind financial support:

**Bha.Ma.**
**Shikshana mattu Samskritika Vedike**
Shimoga

**Malnad Arecanut Syndicate**
Shimoga

**Mangalore Electricity Supply Company Ltd.**

**Karnataka State Tourism Department**
Bangalore

**Sanskriti Bharti Trust**
Delhi

**National Education Society**
Shimoga

**Shimoga Milk Federation**
Shimoga

**Karnataka Bank Ltd.**
H.O. Mangalore

**MAMCOS**
Shimoga